ಎನ್ನುವುದೇ ದೊಡ್ಡ ಮೋಜು ಅಲ್ಲವ? ಒಂದು ಪ್ರಾಣಿಯನ್ನು ಹಿಂಸಿಸಿ ಮಜಾ ನೋಡುವುದಕ್ಕೆ ಆ ಪೋತರಾಜನಿಗೆ ಹಣ ನೀಡಿ ಕರೆತರುವುದು. ಅವನು ಕುಣಿದು ಕುಣಿದು ಆ ಪ್ರಾಣಿಯನ್ನು ಹೀರುವುದು. ದೇವತೆ ಹೀಗೆಲ್ಲಾ ಮಾಡಲು ಹೇಳಿದ್ದಾಳೆಯೇ? ಏನು ಜೋರು ಮಾಡ್ತೀರ? ಆಗಲಿ ಸರ್ಕಾರ ಏನು ಆದೇಶ ಕಳಿಸುತ್ತದೆ ನೋಡೋಣ. ತಾವೆಲ್ಲ ಹೊರಡಿ ಇನ್ನು. ಸರಿರಾತ್ರಿಯಾಯ್ತು.'

ಸುಜನ್ ಕೈಮುಗಿದು ಒಳಗೆ ಬಂದರೂ ಜನ ಕದಲಲಿಲ್ಲ. ಸುಮಾರು ಒಂದು ಗಂಟೆ ಅಲ್ಲೇ ಇದ್ದು ಎದ್ದು ಹೋದರು. ಪೊಲೀಸರು ಗನ್ ಹಿಡಿದು ನಿಂತಿದ್ದರು. ಇನ್‌ಸ್ಪೆಕ್ಟರ್ ಮುರುಳಿ ಮೋಹನ್ ಮತ್ತೆ ಆದೇಶ ನೀಡುವವರೆಗೂ ಅಲ್ಲೇ ಇರಲು ಹೇಳಿದ್ದರು. ಆದ್ದರಿಂದ ಎ.ಸಿ.ಕ್ವಾರ್ಟ್ರಸ್‌ನಿಂದ ಯಾರೂ ಕದಲಲಿಲ್ಲ. ಮಧ್ಯರಾತ್ರಿ ಎರಡು ಗಂಟೆಯ ವೇಳೆಗೆ ಪೊಲೀಸರು ಸ್ಟೇಷನ್ ಕಡೆ ನಡೆದರು.

***

ಊರ ಮಾರಮ್ಮನ ಜಾತ್ರೆ ಎಂಟನೇ ದಿನ ಬಂದೇ ಬಿಟ್ಟಿತು. ಸರ್ಕಾರದಿಂದ ಯಾವುದೇ ಆದೇಶ ಬರಲಿಲ್ಲ. ಸುಜನ್ ಕಾನೂನು ಸಚಿವರಿಗೆ ಕರೆ ಮಾಡಿ ವಿಚಾರಿಸಿದಾಗ, 'ಯಾಕ್ರೀ ಹೀಗ್ ಮಾಡ್ತಿದೀರಾ? ಅಷ್ಟೊಂದು ಅವಸರ. ಇಲ್ಲಿ ವಿರೋಧ ಪಕ್ಷದ ನಾಯಕ ಸಿದ್ಧೇಗೌಡ ಬೆಂಗಳೂರಿಂದ ಬಳ್ಳಾರಿವರೆಗೂ ಕಾಲ್ನಡಿಗೆ ಮಾಡುತ್ತಿದ್ದಾನೆ. ನಾವು ನಮ್ಮ ಸರ್ಕಾರದ ಉಳಿವಿನ ಬಗ್ಗೆ ಯೋಚಿಸ್ತಿದೀವಿ. ನಿಮ್ಮದೇನು ಕಾನೂನು ರೀ... ನಿಮಗೆ ಹೇಗೆ ಬೇಕೋ ಹಾಗೆ ಮಾಡಿ. ಇಲ್ಲವೇ ಹೋರಾಡಿ ಆ ಘಟನೆಗಳನ್ನು ನಿಲ್ಲಿಸಿ. ಇಲ್ಲ ಎರಡು ದಿನ ರಜೆ ಹಾಕಿ ಊರಿಗೆ ಹೋಗ್ರಿ. ನಾನು ಬ್ಯುಸಿ ಇದ್ದೇನೆ, ಮತ್ತೆ ಕಾಲ್ ಮಾಡೋದ್ ಬೇಡ' ಎಂದಾಗ ಮೈ ಜುಮ್ ಅಂದಿತು.

ಸುಜನ್‌ಗೆ ವಾಸ್ತವದ ಗಾಳಿ ಜೋರಾಗಿ ಬೀಸಿತು. ಯಾರನ್ನು ನೆಚ್ಚಿ ಆಗುಹೋಗುಗಳ ಬಗ್ಗೆ ತೀರ್ಮಾನ ತೆಗೆದುಕೊಳ್ಳಬಾರದು. ಬಿಸಿ ಏಟು ಹಿಂದಿನಿಂದ ಬಿದ್ದರೂ ಸರಿ, ಮುಂದೆ ಬಿದ್ದರೂ ಸರಿ ಚೇತರಿಸಿಕೊಳ್ಳಲು ಬಹಳ ಸಮಯ ಬೇಕು. ಸುಮ್ಮನಿದ್ದು ಬಿಡೋಣ. ಆದೇಶ ಬರಲಿಲ್ಲ ಅಂತಲೂ ಹೇಳೋದು ಬೇಡ. ಈ ಸ್ಥಿತಿ ಹೀಗೇ ಇರಲಿ. ಜನ ಈ ದಿನ ಬೆಳಗಿನ



ಜಾವ ಏನು ಮಾಡುತ್ತಾರೋ, ಕೋಣನನ್ನು ಕೊಂದು ಏನು ಸಾಧಿಸುತ್ತಾರೋ ಸಾಧಿಸಿಕೊಳ್ಳಲಿ. ಮುಂದೆ ಗಾವು ಸಿಗಿಯುವ ಮೋಜನ್ನು ಖಂಡಿಸೋಣ' ಎಂದು ಶ್ರೀರಾಮ್ ಕೈಲಿ ಚರ್ಚಿಸಿ ಇರುವ ವಿಷಯ ತಿಳಿಸಿದನು. ಸದ್ಯದ ವಿಷಯ ವಿರೋಧಿಸಲು ಕೈಲಿ ಸರ್ಕಾರದ ಆದೇಶ ಇಲ್ಲದ ಹಾಗಾಯ್ತು. ಕೇವಲ ವಿಜ್ಞಾನ ಸಂಘ, ಪ್ರಾಣಿ ದಯಾ ಸಂಘ ಮತ್ತು ವಿಚಾರವಂತರ ಅರ್ಜಿಯ ಮೇರೆಗೆ ನಾನೇ ಸ್ವಯಂ ನಿರ್ಧಾರ ಕೈಗೊಳ್ಳಬೇಕು ಅಷ್ಟೇ ಎಂದು ಸಂಜೆ ತನ್ನ ಕಚೇರಿಯಲ್ಲಿ ಸಭೆ ಕರೆಯೋಣವೆಂದು ತೀರ್ಮಾನಿಸಿ ಶ್ರೀರಾಮನನ್ನು ಕಳುಹಿಸಿ ಮತ್ತೆ ಕೆಲಸದಲ್ಲಿ ಮಗ್ನನಾದನು.

***

ಎಂಟನೇ ದಿನ ಕೋಣದ ನೆಣ ಬಸಿದು ಅನ್ನ ಕಲಸಿ ಮಾರಮ್ಮನ ಮುಂದೆ ಎಡೆ ಮಾಡಿ ಆಸಾದಿ ಮುಂದೆ ಕುಪ್ಪಳಿಸುತ್ತ ಕುಪ್ಪಳಿಸುತ್ತ ಅನ್ನದ ಜತೆ ಕಲಸಿದ ಹಸಿ ಮಾಂಸಕ್ಕೆ ಬಾಯಿ ಹಾಕಿ ತಿನ್ನುವ ಗೋಪ್ಯ ಪ್ರಸಂಗವನ್ನು ಸರಪಂಚರು, ಪೂಜಾರರು, ಕೋಣ ಕಡಿಯುವವ ಮತ್ತು ಆಸಾದಿ ಇಷ್ಟು ಜನ ಸೇರಿ ಬೇರೆ ಎಲ್ಲೋ ಊರಾಚೆ ಹೋಗಿ ಅಮ್ಮನವರ